# ನಿಜವಾದ ಸ್ನೇಹಿತ ಯಾರು? -೨

(ಹಿಂದಿನ ಸಂಚಿಕೆಯಿಂದ)

(ಹೆಗಡೆ ಮಾಸ್ತರರು ಹುಡುಗರ ನಡುವಿನ ಜಗಳ ಬಿಡಿಸಿದರು. ಅರುಣ ಒಳ್ಳೆಯ ಸ್ನೇಹಸಂಬಂಧದ ಉದಾಹರಣೆಯಾಗಿ ಶ್ರೀಕೃಷ್ಣ-ಸುದಾಮರ ಕತೆ ಹೇಳಿದ. ಹೆಗಡೆ ಮಾಸ್ತರರು ಸ್ವಾಮಿ ವಿವೇಕಾನಂದರು-ಮೋತೀಲಾಲ ಬೋಸರ ದೃಷ್ಟಾಂತವನ್ನು ಹೇಳಿದರು.)

**ಸು**ಧೀರ ಹೇಳಿದ, "ಮೇಷ್ಟ್ರೇ, ನನ್ನ ಅಜ್ಜ ನನಗೆ ಚೈತನ್ಯ ಚರಿತಾಮೃತದ ಕಥೆಗಳನ್ನು ಹೇಳುತ್ತಿರುತ್ತಾರೆ. ಅದರಲ್ಲಿ ಒಂದು ಘಟನೆ ಬರುತ್ತದೆ. ಸ್ನೇಹವನ್ನು ಉಳಿಸಿಕೊಳ್ಳಲು ನಿಜವಾದ ಸ್ನೇಹಿತರು ಎಂಥ ತ್ಯಾಗಕ್ಕೂ ಸಿದ್ಧರಾಗಿರುತ್ತಾರೆ ಎಂಬುದನ್ನು ಅದು ಎತ್ತಿ ತೋರಿಸುತ್ತದೆ."

"ಹಾಗಾದರೆ, ನಾವೆಲ್ಲರೂ ಅದನ್ನು ಕೇಳೋಣ" ಎಂದು ಹೆಗಡೆ ಮಾಸ್ತರರು ಸುಧೀರನನ್ನು ಕತೆ ಹೇಳಲು ಉತ್ತೇಜಿಸಿದರು.

ನಿಮಾಯಿ ಹಾಗೂ ರಘುನಾಥ ಇಬ್ಬರೂ ಆತ್ಮೀಯ ಸ್ನೇಹಿತರು. ಅವರ ಗುರುಗಳು ಅವರಿಬ್ಬರಿಗೂ ಸಂಸ್ಕೃತ ವ್ಯಾಕರಣದ ಮೇಲೆ ಒಂದು ಪ್ರಬಂಧವನ್ನು ಬರೆದು ತರುವಂತೆ ಹೇಳಿದರು. ತುಂಬಾ ಶ್ರಮಪಟ್ಟು ಇಬ್ಬರೂ ಪ್ರಬಂಧವನ್ನು ಬರೆದು ಮುಗಿಸಿದರು. ಮರುದಿವಸ ಸ್ನೇಹಿತರು ದೋಣಿಯಲ್ಲಿ ನದಿಯನ್ನು ದಾಟುತ್ತಿರುವಾಗ, ನಿಮಾಯಿ ರಘುನಾಥನ ಪ್ರಬಂಧವನ್ನೂ, ರಘುನಾಥನು ನಿಮಾಯಿ ಬರೆದ ಪ್ರಬಂಧವನ್ನೂ ಓದತೊಡಗಿದರು. ನಿಮಾಯಿ ನಿಜವಾಗಿಯೂ ಅದ್ಭುತವಾಗಿ ಬರೆದಿದ್ದನು. ಅದನ್ನು ಓದಿದ ರಘುನಾಥನು ನಿರಾಶೆಯಿಂದ ಹೇಳಿದನು, "ನಿಮಾಯಿ, ನಿನ್ನ ಬರಹ ತುಂಬಾ ಚೆನ್ನಾಗಿದೆ. ನಿನ್ನ ಪ್ರಬಂಧವನ್ನು ಓದಿದ ಮೇಲೆ, ನನ್ನ ಪ್ರಬಂಧವನ್ನು ಯಾರೂ ಓದುವುದೇ ಇಲ್ಲವೆಂದು ನನಗನ್ನಿಸುತ್ತದೆ. ನಾನು ಎಷ್ಟೊಂದು ಕಷ್ಟಪಟ್ಟು ಇದನ್ನು ಬರೆದಿದ್ದೆ."

ನಿಮಾಯಿಗೆ ತನ್ನ ಮಿತ್ರನನ್ನು ನೋಡಿ ಕನಿಕರವಾಯಿತು. ಅವನು ತನ್ನ ಪುಸ್ತಕವನ್ನು ತೆಗೆದುಕೊಂಡು, ನದಿಯಲ್ಲಿ ಹಾಕಿಬಿಟ್ಟನು!

"ಓ ನಿಮಾಯಿ! ಏನು ಮಾಡಿಬಿಟ್ಟೆ?" ರಘುನಾಥ ಕೂಗಿದನು.

ನಿಮಾಯಿ ತೃಪ್ತಿಯಿಂದ ಹೇಳಿದನು, "ಅಬ್ಬಾ, ಈಗ ನನಗೆ ನೆಮ್ಮದಿಯಾಯಿತು. ಈಗ ಎಲ್ಲರೂ ನಿನ್ನ ಪ್ರಬಂಧವನ್ನೇ ಓದುತ್ತಾರೆ."

ಈ ನಿಮಾಯಿ ಬೇರೆ ಯಾರೂ ಅಲ್ಲ. ಈಗ ಎಲ್ಲರಿಂದಲೂ ಪೂಜಿಸಲ್ಪಡುತ್ತಿರುವ ಶ್ರೀಚೈತನ್ಯ ಮಹಾಪ್ರಭು.

"ಸುಧೀರ್, ನಿನ್ನ ಅಜ್ಜ ಹೇಳಿದ ಕಥೆ ತುಂಬಾ ಚೆನ್ನಾಗಿದೆ. ನಮ್ಮ ತರಗತಿಗೆ ಬಂದು ಕೆಲವು ಒಳ್ಳೆಯ ಕಥೆಗಳನ್ನು ಹೇಳುವಂತೆ ಅವರನ್ನು ಕೇಳಿಕೊಳ್ಳುತ್ತೀಯಾ?" ಎಂದರು ಹೆಗಡೆ ಮಾಸ್ತರ್.

ಹೆಗಡೆ ಮಾಸ್ತರರು ಹೇಳಿದರು, "ಸ್ನೇಹದಲ್ಲಿ ತ್ಯಾಗವನ್ನು ಕುರಿತು ತಿಳಿಸುವ ಇನ್ನೊಂದು ಕಥೆಯನ್ನು ನಾನು ಹೇಳುತ್ತೇನೆ."

ಇದು ಸ್ವಾಮಿ ವಿಜ್ಞಾನಾನಂದರ ಜೀವನದಲ್ಲಿ ಬರುವ ಘಟನೆ. ಸ್ವಾಮಿ ವಿವೇಕಾನಂದರಂತೆ ವಿಜ್ಞಾನಾನಂದರು ಸಹ ಶ್ರೀರಾಮಕೃಷ್ಣರ ನೇರ ಶಿಷ್ಯರು. ಅವರ ಪೂರ್ವಾಶ್ರಮದ ಹೆಸರು ಹರಿಪ್ರಸನ್ನ. ೧೮೮೭ ರಲ್ಲಿ ಹರಿಪ್ರಸನ್ನನು ಪುಣೆಯ ತಾಂತ್ರಿಕ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರಿಂಗ್ ಓದುತ್ತಿದ್ದನು. ಅವನು ತುಂಬಾ ಬುದ್ಧಿವಂತ ವಿದ್ಯಾರ್ಥಿ. ಎಲ್ಲಾ ಶಿಕ್ಷಕರೂ ಸಹಪಾಠಿಗಳೂ ಅವನನ್ನು ತುಂಬಾ ಇಷ್ಟಪಡುತ್ತಿದ್ದರು. ಆ ದಿನಗಳಲ್ಲಿ ತರಗತಿಯಲ್ಲಿ ಪ್ರಥಮ ಮತ್ತು ದ್ವಿತೀಯ ರ್‍ಯಾಂಕ್ ಪಡೆದ ಕಾಲೇಜಿನ ವಿದ್ಯಾರ್ಥಿಗಳಿಗೆ ತಕ್ಷಣ ಸರಕಾರಿ ಉದ್ಯೋಗ ಸಿಗುತ್ತಿತ್ತು. ಹರಿಪ್ರಸನ್ನನ ತರಗತಿಯಲ್ಲಿ ರಾಧಿಕಾ ಪ್ರಸಾದ ರಾಯ್ ಎಂಬ ಬಡ ಬುದ್ಧಿವಂತ ವಿದ್ಯಾರ್ಥಿಯಿದ್ದನು. ರಾಧಿಕಾ ಪ್ರಸಾದನಿಗೆ ತನ್ನ ಕುಟುಂಬವನ್ನು ನೋಡಿಕೊಳ್ಳಲು ತಕ್ಷಣ ಕೆಲಸದ ಆವಶ್ಯಕತೆ ಇತ್ತು. ಅದಕ್ಕಾಗಿ ಅವನು, ರ್‍ಯಾಂಕ್ ಪಡೆದು ಒಳ್ಳೆಯ ಉದ್ಯೋಗವನ್ನು ಸಂಪಾದಿಸಬೇಕೆಂದು ಪ್ರಯತ್ನಿಸುತ್ತಿದ್ದನು. ಆದರೆ ಹರಿಪ್ರಸನ್ನನು ರಾಧಿಕಾ ಪ್ರಸಾದನಿಗಿಂತಲೂ ಬುದ್ಧಿವಂತ ವಿದ್ಯಾರ್ಥಿ. ತನಗೆ ಮೊದಲನೆಯ ಅಥವಾ ಎರಡನೆಯ ರ್‍ಯಾಂಕ್ ಬರುವುದು ನಿಶ್ಚಿತವೆಂದು ಹರಿಪ್ರಸನ್ನನಿಗೆ ಗೊತ್ತಿತ್ತು. ಪರೀಕ್ಷೆಗೆ ಇನ್ನೂ



ಸ್ವಲ್ಪ ದಿನಗಳಿರುವಾಗ ಹರಿಪ್ರಸನ್ನ ರಾಧಿಕಾ ಪ್ರಸಾದನಿಗೆ ಹೇಳಿದ, "ಮಿತ್ರಾ, ನಿನ್ನ ಮನೆಯ ಹಣಕಾಸು ಪರಿಸ್ಥಿತಿ ಉತ್ತಮವಾಗಿಲ್ಲವೆಂದು ನನಗೆ ಗೊತ್ತು. ನೀನು ರ್‍ಯಾಂಕ್ ಪಡೆದರೆ ನಿನಗೆ ಖಂಡಿತವಾಗಿಯೂ ಒಳ್ಳೆಯ ಸರಕಾರಿ ಕೆಲಸ ಸಿಗುವುದು. ಅದಕ್ಕಾಗಿ ನಾನು ಈ ವರ್ಷ ಪರೀಕ್ಷೆಗೆ ಕುಳಿತುಕೊಳ್ಳಬಾರದೆಂದು ನಿಶ್ಚಯಿಸಿದ್ದೇನೆ."

ಹರಿಪ್ರಸನ್ನ ಆ ವರ್ಷ ಪರೀಕ್ಷೆ ಬರೆಯಲಿಲ್ಲ. ಅವನ ಸ್ನೇಹಿತನಿಗೆ ಸಹಾಯ ಮಾಡಲು ಅವನು ಒಂದು ವರ್ಷವನ್ನೇ ತ್ಯಾಗಮಾಡಿಬಿಟ್ಟನು! ದುರದೃಷ್ಟವಶಾತ್ ರಾಧಿಕಾ ಪ್ರಸಾದನಿಗೆ ರ್‍ಯಾಂಕ್ ದೊರೆಯಲಿಲ್ಲ. ಆದರೆ ಅವನು ತನ್ನ ಜೀವನದುದ್ದಕ್ಕೂ ಹರಿಪ್ರಸನ್ನನ ಸ್ನೇಹ ಹಾಗೂ ತ್ಯಾಗಗಳನ್ನು ಮರೆಯಲಿಲ್ಲ. ಮುಂದಿನ ವರ್ಷ ಹರಿಪ್ರಸನ್ನನು ಪರೀಕ್ಷೆಯಲ್ಲಿ ಎರಡನೆಯ ರ್‍ಯಾಂಕ್ ಪಡೆದು ಉತ್ತರಪ್ರದೇಶದ ಗಾಜಿಪುರದಲ್ಲಿ ಜಿಲ್ಲಾ ಇಂಜಿನಿಯರ್ ಆಗಿ ಸರಕಾರದಿಂದ ನೇಮಕವಾದನು.

ಹೆಗಡೆ ಮಾಸ್ತರರು ಕಥೆಯನ್ನು ಹೇಳಿ ಮುಗಿಸಿದ ಮೇಲೆ ಶಿವಸ್ವಾಮಿ ಕೇಳಿದನು, "ಮೇಷ್ಟ್ರೇ, ನಾವು ನಿಜವಾದ ಸ್ನೇಹಿತನನ್ನು ಹುಡುಕುವುದು ಹೇಗೆ?"

ಹೆಗಡೆ ಮಾಸ್ತರರು ಹೇಳಿದರು "ತುಂಬಾ ಒಳ್ಳೆಯ ಪ್ರಶ್ನೆ. ಒಳ್ಳೆಯ ಸ್ನೇಹಿತನನ್ನು ಆರಿಸಿಕೊಳ್ಳುವುದು ತುಂಬಾ ಮುಖ್ಯ. ಒಂದು ಮಾತಿದೆ – **ಸಹವಾಸದಂತೆ ನಡತೆ**. ನೀನು ಕೆಟ್ಟವರೊಡನೆ ಸ್ನೇಹ ಬೆಳೆಸಿದರೆ, ನಿನ್ನ ನಡತೆಯೂ ಕೆಡುವುದು. ಅದು ನಿನ್ನ ಓದಿನ ಮೇಲೂ ಕೆಟ್ಟ ಪರಿಣಾಮ ಉಂಟುಮಾಡಿ ನಿನ್ನ ಜೀವನವನ್ನೇ ಹಾಳುಮಾಡುವುದು. ಆದರೆ ಉತ್ತಮ ಗುಣ ನಡತೆಗಳಿರುವ ಸ್ನೇಹಿತನು ನಿನ್ನ ಜೀವನವನ್ನೇ ಬದಲಾಯಿಸಿ ನಿನ್ನನ್ನು ಉತ್ತಮ ಮಟ್ಟಕ್ಕೆ ಏರುವಂತೆ ಮಾಡುತ್ತಾನೆ. ನಿಮಾಯಿ ಮತ್ತು ಸ್ವಾಮಿ ವಿಜ್ಞಾನಾನಂದರ ಜೀವನದ ಘಟನೆಗಳು ನಿಜವಾದ ಸ್ನೇಹಿತನ ಲಕ್ಷಣಗಳನ್ನು ತೋರಿಸುತ್ತವೆ. ಕಾಲ, ದೇಶ, ಹಣ ಹಾಗೂ ಅಧಿಕಾರ ಇವು ಯಾವುವೂ ನಿಜವಾದ ಸ್ನೇಹಕ್ಕೆ ಅಡ್ಡಿ ಮಾಡಲಾರವು ಎಂಬುದನ್ನು ಭಗವಾನ್ ಶ್ರೀಕೃಷ್ಣನ ಜೀವನದಲ್ಲಿ ನೋಡುತ್ತೇವೆ."

" ನಿಜವಾದ ಸ್ನೇಹಿತನಲ್ಲಿ ಇನ್ನೂ ಹಲವಾರು ಗುಣಗಳಿವೆ. ನೀವು ತಪ್ಪು ದಾರಿಗೆ ಹೋಗದಂತೆ ಅವನು ನಿಮ್ಮನ್ನು ತಡೆಯುತ್ತಾನೆ. ನಿಮ್ಮ ದೋಷಗಳನ್ನು ಹೇಳಲು ಅವನು ಹಿಂಜರಿಯುವುದಿಲ್ಲ. ಅವನು ನಿಷ್ಕಪಟಿಯಾಗಿರುತ್ತಾನೆ. ನಿಮ್ಮನ್ನು ಅನಗತ್ಯವಾಗಿ ಹೊಗಳುವುದಾಗಲಿ, ತೆಗಳುವುದಾಗಲಿ ಮಾಡುವುದಿಲ್ಲ. ಆದರೆ ಹಿಂದಿನಿಂದ ಯಾರಾದರೂ ನಿಮ್ಮನ್ನು ನಿಂದಿಸಿದರೆ ಅವನು ಅದನ್ನು ಸಹಿಸಲಾರ. ಸಮಾಜದಲ್ಲಿ ನಿಮ್ಮ ಗೌರವಕ್ಕೆ ಕುಂದಾಗುವ ಯಾವ ಕೆಲಸವನ್ನೂ ಅವನು ಮಾಡುವುದಿಲ್ಲ. ಕೊನೆಯದಾಗಿ, ನಿಜವಾದ ಸ್ನೇಹಿತನು ನೀವು ಎಷ್ಟೇ ಅಪಾಯದಲ್ಲಿರಲಿ, ಎಂತಹುದೇ ಕಷ್ಟದಲ್ಲಿರಲಿ, ನಿಮ್ಮನ್ನು ಕೈಬಿಡುವುದಿಲ್ಲ."

"ನಾನು ಸ್ವಾಮಿ ವಿವೇಕಾನಂದರ ಜೀವನದ ಇನ್ನೊಂದು ಘಟನೆಯನ್ನು ಹೇಳುತ್ತೇನೆ. ಇದು ಸ್ವಾಮೀಜಿ ಇನ್ನೂ ಹುಡುಗರಾಗಿದ್ದಾಗ ನಡೆದ ಘಟನೆ. ನರೇನ್ ಒಮ್ಮೆ ತನ್ನ ಕೆಲವು ಸ್ನೇಹಿತರೊಂದಿಗೆ ಕೊಲ್ಕತಾದ ಕೋಟೆಯೊಂದನ್ನು ನೋಡಲು ಹೋದನು. ಮಾರ್ಗಮಧ್ಯದಲ್ಲಿ ಒಬ್ಬ ಹುಡುಗನು ತನಗೆ ಕಾಲು ನೋಯುತ್ತಿದೆಯೆಂದು ಹೇಳಿದನು. ಉಳಿದವರೆಲ್ಲಾ ಅವನನ್ನು ಹಾಸ್ಯ ಮಾಡಿ ಅಲ್ಲೇ ಬಿಟ್ಟು ಮುಂದೆ ಹೋದರು. ಆ ಹುಡುಗ ಅಲ್ಲೇ ನೆಲದಲ್ಲಿ ಕುಸಿದು ಕುಳಿತನು. ಸ್ವಲ್ಪ ಸಮಯದಲ್ಲೇ ನೋವು ಉಲ್ಬಣಿಸಿತು. ನರೇನ್ ಎಲ್ಲರ ಜೊತೆ ಮುಂದೆ ಹೋಗಿಬಿಟ್ಟಿದ್ದನು. ಆದರೆ ಒಮ್ಮೆಲೆ ನಿಂತು ಹೇಳಿದನು, 'ಅವನಿಗೆ ಏನೋ ತೀವ್ರವಾದ ತೊಂದರೆ ಇರಬೇಕು. ನೀವೆಲ್ಲಾ ಮುಂದೆ ಹೋಗಿ. ನಾನು ಅವನ ಜೊತೆ ಹಿಂದಿನಿಂದ ಬರುತ್ತೇನೆ.' ನರೇನ್ ಸರಿಯಾದ ಸಮಯಕ್ಕೆ ಹಿಂದಿರುಗಿ ಬಂದನು. ಅಷ್ಟು ಹೊತ್ತಿಗಾಗಲೇ ಆ ಹುಡುಗನಿಗೆ ತೀವ್ರ ಜ್ವರ ಬಂದುಬಿಟ್ಟಿತ್ತು. ನರೇನ್ ಅವನನ್ನು ನಿಧಾನವಾಗಿ ಹತ್ತಿರದಲ್ಲಿದ್ದ ಬಂಡಿಯೊಂದರಲ್ಲಿ ಹತ್ತಿಸಿಕೊಂಡು ಮನೆಗೆ ತಲುಪಿಸಿದನು."

ಈ ಕಥೆಗಳನ್ನೆಲ್ಲಾ ಕೇಳಿದ ಮೇಲೆ, ಎಲ್ಲರೂ ಸ್ನೇಹದ ಸ್ಫೂರ್ತಿಯಿಂದ ತುಂಬಿಹೋಗಿದ್ದರು. ಎಲ್ಲರೂ ಪರಸ್ಪರ ಕೈಕುಲುಕಿದರು. ರಾಮಣ್ಣ ತನ್ನ ತರಗತಿಯವರ ಜೊತೆ ಸ್ನೇಹ ಬೆಳೆಸುವುದಾಗಿ ಮಾತುಕೊಟ್ಟನು. ಹೆಗಡೆ ಮಾಸ್ತರರು ಅವನ ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಾ ಹೇಳಿದರು, "ಈಗ ನೀನು ಕೇಳಿದ್ದನ್ನು ಜೀವನದಲ್ಲಿ ರೂಢಿಸಿಕೊಳ್ಳಲು ಪ್ರಯತ್ನಿಸು. ನೀವು ಪ್ರತಿಯೊಬ್ಬರೂ ಆದರ್ಶ ಸ್ನೇಹಿತರಾಗುವಿರೆಂದು ನಾನು ಆಶಿಸುತ್ತೇನೆ. ಇದನ್ನು ಯಾವಾಗಲೂ ನೆನಪಿನಲ್ಲಿಡಿ: **ಒಳ್ಳೆಯ ಸ್ನೇಹಿತರನ್ನು ಪಡೆಯುವ ಅತ್ಯುತ್ತಮ ವಿಧಾನವೆಂದರೆ ಮೊದಲು ನಾವು ಒಳ್ಳೆಯ ಸ್ನೇಹಿತರಾಗಬೇಕು."**

(**ಕೃಪೆ:** *The Guiding Light*, Pub: Ramakrishna Mission, Belur Math, Howrah, West Bengal )
(**ಅನುವಾದ:** ಬ್ರಹ್ಮಚಾರಿ ಬಾಲಸುಬ್ರಹ್ಮಣ್ಯ)

## ಆಶ್ರಮದ ಕಾರ್ಯಕ್ರಮಗಳು

**ಆಗಸ್ಟ್ 2009**

| | | |
|---|---|---|
| 1 | ಶನಿವಾರ | ಏಕಾದಶಿ |
| 5 | ಬುಧವಾರ | ಸ್ವಾಮಿ ನಿರಂಜನಾನಂದ ಜಯಂತಿ |
| 13 | ಗುರುವಾರ | ಶ್ರೀಕೃಷ್ಣಜನ್ಮಾಷ್ಟಮಿ |
| 16 | ಭಾನುವಾರ | ಏಕಾದಶಿ |
| 19 | ಬುಧವಾರ | ಸ್ವಾಮಿ ಅದ್ವೈತಾನಂದ ಜಯಂತಿ |
| 23 | ಭಾನುವಾರ | ಗಣೇಶ ಚತುರ್ಥಿ |
| 31 | ಸೋಮವಾರ | ಏಕಾದಶಿ |